# ಮೈಸೂರಿನಲ್ಲಿ ‘ವಿವೇಕ ಸ್ಮಾರಕ’ ಮತ್ತು ಅದರ ಯೋಜನೆಗಳು

**ಹಾಲೇಶ್ ಜಂಬಗಿ**

ಸ್ವಾಮಿ ವಿವೇಕಾನಂದರು ಮೈಸೂರಿನಲ್ಲಿ ತಂಗಿದ್ದ ಸ್ಥಳದಲ್ಲಿ ‘ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕ’ವು ನಿರ್ಮಾಣಗೊಳ್ಳುತ್ತಿದೆ. ಈ ಕೇಂದ್ರ ಆರಂಭಗೊಂಡ ಬಗೆ, ಮುಂದಿನ ಬೆಳವಣಿಗೆ ಹಾಗೂ ಯೋಜನೆಗಳ ಬಗ್ಗೆ ಇಲ್ಲಿ ವಿವರಿಸಲಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



‘ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕ’ ನಿಯೋಜಿತ ಕಟ್ಟಡದ ಮಾದರಿ

ಕರ್ನಾಟಕ ರಾಜ್ಯದ ಎರಡನೇ ಅತಿ ದೊಡ್ಡ ನಗರ, ಚಂದದ ನಗರ, ಹೆಮ್ಮೆಯ ಸಾಂಸ್ಕೃತಿಕ ರಾಜಧಾನಿಯೇ ನಾವೆಲ್ಲಾ ಇಷ್ಟಪಡುವ ಮೈಸೂರು. ತಾಯಿ ಚಾಮುಂಡಿಯ ಸುಕ್ಷೇತ್ರವಾಗಿರುವುದಲ್ಲದೆ, ಮಹಾನ್ ವಿಭೂತಿ ಪುರುಷರನ್ನು ತನ್ನೆಡೆಗೆ ಸೆಳೆದ ಪವಿತ್ರ ಪುಣ್ಯ ಭೂಮಿಯೂ ಆಗಿದೆ. ಇಂಥ ನಗರಕ್ಕೆ ... ಅವತಾರ ವರಿಷ್ಠರಾದ ಶ್ರೀರಾಮಕೃಷ್ಣ ಪರಮಹಂಸರ ಪರಮ ಶಿಷ್ಯರಾದ ಸ್ವಾಮಿ ವಿವೇಕಾನಂದರು ೧೮೯೨ ನವಂಬರ್ ತಿಂಗಳಲ್ಲಿ ಬಂದು, ಎರಡು–ಮೂರು ವಾರಗಳು ಉಳಿದುಕೊಂಡು, ಉಪನ್ಯಾಸ ಮಾಡಿ, ಮೈಸೂರಿನಲ್ಲಿ ಓಡಾಡಿ, ದಿವಾನರ–ರಾಜರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅಂದಿನ ಸಾಮಾನ್ಯ ಸಂನ್ಯಾಸಿಯೇ ಮುಂದೆ ವಿಶ್ವ ವಿಜೇತ ಸ್ವಾಮಿ ವಿವೇಕಾನಂದರಾದರು. ಇವರು ಉಳಿದುಕೊಂಡ ಪವಿತ್ರ ತಾಣವೊಂದು ‘ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕ’ವಾಗಿ ಮೈದಳೆಯುತ್ತಿದೆ. ಇದು ಮೈಸೂರಿನ ಸಹಸ್ರಾರು ಯುವ ವಿದ್ಯಾರ್ಥಿಗಳಿಗೆ ಸ್ಫೂರ್ತಿಯ ಸೆಲೆಯೂ, ಜ್ಞಾನದ ನೆಲೆಯು, ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆ, ವ್ಯಕ್ತಿತ್ವ ವಿಕಸನ, ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರವೂ ಆಗಿದೆ. ಹೀಗೆ ಹಲವಾರು ರಂಗಗಳ ಕೌಶಲ್ಯಾಭಿವೃದ್ಧಿಯನ್ನು ಧಾರೆಯರೆಯುವ ಶ್ರದ್ಧಾ ಸೇವಾ ಕೇಂದ್ರವೊಂದು ತಲೆ ಎತ್ತುತ್ತಿರುವುದು ಮೈಸೂರಿನ ನಾಗರಿಕರೆಲ್ಲರ ಸೌಭಾಗ್ಯವಾಗಿದೆ. ‘ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ’ ಎಂಬ ಆದರ್ಶವನ್ನು ಇಟ್ಟುಕೊಂಡಂತಹ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಈ ಕೇಂದ್ರದ ನಿರ್ಮಾಣದ ಜೊತೆಗೆ ಮುಂದಿನ ಎಲ್ಲ ಜವಾಬ್ದಾರಿಯನ್ನೂ ನಿರ್ವಹಿಸುವ ಸೇವಾದೀಕ್ಷೆಯನ್ನು ಹೊಂದಿದೆ. ಈ ವಾಸ್ತವವೆಲ್ಲ ನಮ್ಮ ಕಣ್ಮುಂದೆ ಗೋಚರಿಸುತ್ತಿದೆ. ಆದರೆ ಇಷ್ಟೆಲ್ಲ ಪ್ರಗತಿಯಾಗಿ ಹೊರ ಹೊಮ್ಮಲಿಕ್ಕೆ

ಸಾಕಷ್ಟು ಪರಿಶ್ರಮ, ಹೋರಾಟ, ಅಡೆತಡೆ, ಕಾಲ-ಜನ, ಕೋರ್ಟ್-ಕಛೇರಿ, ನಾನಾರೀತಿಯ ಅಗ್ನಿಪರೀಕ್ಷೆಗಳನ್ನೊಳಗೊಂಡ ಹಿನ್ನೆಲೆಯಿದೆ. ಸ್ವಾಮಿ ವಿವೇಕಾನಂದರು ಬಂದು, ಕೆಲಕಾಲ ನೆಲೆಸಿ, ಪಾದಸ್ಪರ್ಶಮಾಡಿದ ಪುಣ್ಯಭೂಮಿಯ ಐತಿಹ್ಯದ ಜೊತೆಗೆ 'ವಿವೇಕ ಸ್ಮಾರಕ'ದ ಜನಪರ ಕಾಳಜಿಯ ಯೋಜನೆಗಳ ಅನಾವರಣವೇ ಈ ಒಂದು ಲೇಖನದ ಉದ್ದೇಶವಾಗಿದೆ.

ಸ್ವಾಮಿ ವಿವೇಕಾನಂದರು ದಕ್ಷಿಣ ಭಾರತ ಪ್ರವಾಸದಲ್ಲಿ ಮೈಸೂರಿಗೆ ಬಂದು ನೆಲೆಸಿದ್ದು, ಅನಾಥಾಶ್ರಮ ಅಥವಾ ನಿರಂಜನ ಮಠದಲ್ಲಿ. ಈ ಹಿನ್ನೆಲೆಯಲ್ಲಿ, ಸ್ವಾಮಿಜೀಯವರು ತಂಗಿದ್ದ ತಾಣವನ್ನು ಗುರುತಿಸಲಾಗಿದ್ದು, ಈ ಜಾಗವನ್ನು ಶ್ರೀರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರಿಸಲು ಸರ್ಕಾರವು ನೀಡಿದ ಸಹಕಾರ, ವಿಘ್ನಗಳು, ನಂತರದಲ್ಲಿ ವಿವೇಕ ಸ್ಮಾರಕದ ಕಟ್ಟಡದ ಆರಂಭ, ಸ್ಮಾರಕದ ಯೋಜನೆಗಳನ್ನು ಈ ನಿಟ್ಟಿನಲ್ಲಿ ಅವಲೋಕಿಸೋಣ.

### ಸ್ವಾಮಿವಿವೇಕಾನಂದರ ದಕ್ಷಿಣ ಭಾರತದ ಪ್ರವಾಸ

೧೨ ಜನವರಿ ೧೮೬೩ ರಲ್ಲಿ ಜನಿಸಿದ ನರೇಂದ್ರನಾಥ ದತ್ತ, ವಿಶ್ವಕಂಡಂತಹ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರು ಮಾನವ ಪ್ರಪಂಚಕ್ಕೆ ಮಹಾನ್ ಸದ್ಗುರುವಾಗಿ, ತಮ್ಮ ಛಾಪನ್ನು ಮೂಡಿಸಿದ್ದಾರೆ. ಅವರ ಚಿಂತನೆಗಳಿಂದ ಜಗತ್ತಿನ ಎಲ್ಲಾವರ್ಗದವರು ಅವರನ್ನು ಮೆಚ್ಚಿ, ಒಪ್ಪಿ, ಸ್ಫೂರ್ತಿ ಪಡೆದು ತಮ್ಮ ತಮ್ಮ ಬದುಕಿನ ವಿಸ್ತಾರವನ್ನು ವಿಕಾಸ ಮಾಡಿಕೊಂಡಿದ್ದಾರೆ. ಇದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕಾರಣದಿಂದ ಸ್ವಾಮಿ ವಿವೇಕಾನಂದರು ಇಂದಿಗೂ ಪ್ರಸ್ತುತವೇ ಆಗಿದ್ದಾರೆ. ಮನುಕುಲದ ದುಃಖ, ನೋವನ್ನು ಹೋಗಲಾಡಿಸಲು ನಿಃಸ್ವಾರ್ಥಪರರಾಗಿ, ಪ್ರಾಮಾಣಿಕವಾಗಿ ಯಾರು ಯಾರು ಪ್ರಯತ್ನಿಸಿದ್ದಾರೋ ಅವರನ್ನು ಜಗತ್ತು ಎಂದಿಗೂ ಮರೆಯುವುದಿಲ್ಲ. ಅಂಥವರ ಸಾಲಿನಲ್ಲಿ ಅಗ್ರಮಾನ್ಯರಾಗಿ ಕಂಗೊಳಿಸುವ ಧ್ರುವತಾರೆ, ಪುರುಷ ಸಿಂಹ, ಯುವಜನಾಂಗವನ್ನು ಆಕರ್ಷಿಸುವ ವ್ಯಕ್ತಿತ್ವದ ಹಿಂದೂ ಸಂನ್ಯಾಸಿ, ತತ್ತ್ವಜ್ಞಾನಿ, ಲೇಖಕ, ಧಾರ್ಮಿಕ ಶಿಕ್ಷಕ, ಕುವೆಂಪು ಹೇಳಿದಂತೆ 'ಮಹಾನ್ ಮಾನವ ಮಿತ್ರ' ಸ್ವಾಮಿ ವಿವೇಕಾನಂದರು.




ಸ್ವಾಮೀಜಿ ೧೮೯೧ನೇ ಫೆಬ್ರವರಿಯಂದು ತಮ್ಮ ಗುರುಭಾಯಿಗಳ ಆತ್ಮೀಯ ಮಿತ್ರತ್ವದ ಬಾಂಧವ್ಯದ ಸುವರ್ಣ ಶೃಂಖಲೆಗಳನ್ನು ಬಿಡಿಸಿಕೊಂಡು, ಪರಿವ್ರಾಜಕರಾಗಿ ದೇಶಪರ್ಯಟನೆ ಮಾಡುವ ದಿವ್ಯ ಸಂಕಲ್ಪವನ್ನು ಮಾಡಿದರು. ಕಲ್ಕತ್ತೆಯ ಕಾಳಿಯ ಕ್ಷೇತ್ರದಿಂದ ಹೊರಟು ಉತ್ತರ ಭಾರತದ ಕ್ಷೇತ್ರಗಳನ್ನು ದರ್ಶಿಸಿದರು. ಕೆಲವು ರಾಜರ ಸಂದರ್ಶನ ಮಾಡುತ್ತಾ ವೇದಾಂತದ ವಿಚಾರದ ಮಹತ್ವ ತಿಳಿಸುತ್ತಾ, ದಕ್ಷಿಣದ ಕಡೆಗೆ ಸಾಗಿ ಬಂದರು. ಪೂನಾದಿಂದ ಕೊಲ್ಹಾಪುರಕ್ಕೆ ಬಂದು, ಅಲ್ಲಿಂದ ೧೮೯೨ ಅಕ್ಟೋಬರ್ ೧೫ರಂದು ಬೆಳಗಾವಿಯನ್ನು ತಲುಪಿದರು. ತದನಂತರ ಗೋವೆಗೆ ತೆರಳಿ, ನಂತರ ಬೆಂಗಳೂರಿಗೆ ಬಂದರು. ಸ್ವಾಮೀಜಿ ಬೆಂಗಳೂರಿನಲ್ಲಿ ತಂಗಿದ್ದಾಗ, ಮೈಸೂರಿನ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರ್ ಅವರ ಪರಿಚಯವಾಗಿತ್ತು. ದಿವಾನ್ ಅವರು ವ್ಯಕ್ತಿಗಳ ಪ್ರತಿಭೆಯನ್ನು ಗುರುತಿಸುವುದರಲ್ಲಿ ಸಿದ್ಧಹಸ್ತರು. ಪ್ರಖರ ತೇಜಸ್ವಿನಿಂದ ಬೆಳಗುತ್ತಿದ್ದ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ, ಅವರ ತಪಸ್ಸು ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಅವರು ಗುರುತಿಸಿದರು. ಮೈಸೂರಿನ ತಮ್ಮ ಮನೆಗೆ ದಿವಾನರು ಸ್ವಾಮೀಜಿಯವರನ್ನು ಆಮಂತ್ರಿಸಿದರು. ದಿವಾನರ ಕರೆಗೆ ಓಗೊಟ್ಟು, ಸ್ವಾಮಿ ವಿವೇಕಾನಂದರು ೧೮೯೨ರ ನವಂಬರ್ ತಿಂಗಳಿನಲ್ಲಿ ಚಾಮುಂಡಿ ತಾಯಿಯ ಸುಕ್ಷೇತ್ರವಾದ ಮೈಸೂರಿಗೆ ಆಗಮಿಸಿದರು.

### ಅನಾಥಾಲಯ - ನಿರಂಜನ ಮಠದಲ್ಲಿ ವಾಸ್ತವ್ಯ

ಆ ಸಮಯದಲ್ಲಿ ದಿವಾನರು, ಮೈಸೂರಿನ ಮಹಾರಾಜ ಚಾಮರಾಜೇಂದ್ರ ಒಡೆಯರ್ ಮತ್ತು ಬ್ರಿಟಿಷ್ ಅಧಿಕಾರಿ ಲಾನ್ಸ್ ಡೌನ್ ಅವರೊಂದಿಗೆ ಖೆಡ್ಡಾ ವೀಕ್ಷಣೆಗೆಂದು ಹೆಗ್ಗಡದೇವನಕೋಟೆಗೆ ನವೆಂಬರ್-೧೦-೧೮೯೨ರಲ್ಲಿ ಹೋಗಿದ್ದರು. ಅದೇ ಸಮಯದಲ್ಲಿ ಸ್ವಾಮಿ ವಿವೇಕಾನಂದರು ದಿವಾನರ ಮನೆಗೆ ಬಂದರು. ಅಧಿಕಾರಿಗಳಿಂದ ದಿವಾನರು ಮನೆಯಲ್ಲಿ ಇಲ್ಲದಿರುವುದು ಮನವರಿಕೆಯಾಯಿತು. ಆಗ ಸ್ವಾಮೀಜಿಯವರು ನಾರಾಯಣಶಾಸ್ತ್ರಿ ರಸ್ತೆಯಲ್ಲಿದ್ದ ದಿವಾನರ ಮನೆಗೆ ಹೊಂದಿಕೊಂಡಂತೆ ಹಿಂಬದಿಯಲ್ಲಿದ್ದ ಅಂದಿನ ಅನಾಥಾಶ್ರಮ-ನಿರಂಜನ ಮಠದಲ್ಲೇ ತಂಗಲು ತೀರ್ಮಾನಿಸಿದರು. ಆಗ ಟ್ರಸ್ಟಿ ವೆಂಕಟಕೃಷ್ಣಯ್ಯ (ತಾತಯ್ಯ)ನವರು ಸ್ವಾಮೀಜಿಯವರನ್ನು ಸ್ವಾಗತಿಸಿ ಉಪಚರಿಸಿದರು. ತಾತಯ್ಯ, ಅಂಬಳೆ ಅಣ್ಣಯ್ಯ ಪಂಡಿತರು ಅನಾಥಾಲಯದಲ್ಲಿ ಸರಿಯಾದ ವ್ಯವಸ್ಥೆಯಿಲ್ಲ ಅದಕ್ಕಾಗಿ ಅರಮನೆಯ ಅತಿಥಿಗೃಹದಲ್ಲಿ ವಸತಿ ವ್ಯವಸ್ಥೆ ಮಾಡುವುದಾಗಿ ಕೇಳಿಕೊಂಡರು. ಆಗ ಸ್ವಾಮೀಜಿ ನಯವಾಗಿಯೇ ಅರಮನೆಯ ಆತಿಥ್ಯವನ್ನು ಬಯಸದೆ, ಅಂದಿನ ಅನಾಥಾಲಯ, ನಿರಂಜನ ಮಠದಲ್ಲೇ ತಂಗಲು ತೀರ್ಮಾನಿಸಿದರು. ಅಲ್ಲಿನ ಶಿವಾಲಯವು ಅವರನ್ನು ವಿಶೇಷವಾಗಿ ಆಕರ್ಷಿಸಿತು. ಅಲ್ಲಿಯೆ ಹೆಚ್ಚು ಧ್ಯಾನಾಸಕ್ತರಾಗಿರುತ್ತಿದ್ದರು. ಅಲ್ಲಿನ ಮಕ್ಕಳಿಗೆ ನೀತಿಯುತ ಕಥೆಗಳನ್ನು ಹೇಳಿ ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬುತ್ತಿದ್ದರು.

ಒಂದು ದಿನ ಸ್ವಾಮೀಜಿ ಬೆಟ್ಟಕ್ಕೆ ಹೋಗಿ ತಾಯಿ ಚಾಮುಂಡಿಯ ದರ್ಶನವನ್ನು ಪಡೆದರು.

ಸ್ವಾಮಿ ವಿವೇಕಾನಂದರ ಪವಿತ್ರ ಪಾದಸ್ಪರ್ಶದಿಂದ ಈ ಸ್ಥಳವು ಪಾವನಗೊಂಡಿದೆ. ಧ್ಯಾನಸಿದ್ಧರಾದ ಸ್ವಾಮೀಜಿ, ಇಲ್ಲಿ ಹೆಚ್ಚು ಧ್ಯಾನ ಮಗ್ನರಾಗಿರುತ್ತಿದ್ದರು. ಅವರ ಜೀವ ಕಾರುಣ್ಯದ ಮತ್ತು ಧ್ಯಾನದ ಆಧ್ಯಾತ್ಮಿಕ ತರಂಗಗಳಿಂದ ಈ ಸ್ಥಳವು ಪವಿತ್ರಗೊಂಡು ಅದೊಂದು ದಿವ್ಯ ತಾಣವಾಗಿದೆ. ಈ ತಾಣಕ್ಕೆ ಭೇಟಿ ನೀಡುವ ಜನರಿಗೆ ಸ್ಫೂರ್ತಿ ನೀಡುವ ಆತ್ಮವಿಶ್ವಾಸವನ್ನು ವೃದ್ಧಿಸುವ ಮತ್ತು ಆತ್ಮ ಜಾಗೃತಿಗೊಳಿಸುವ ಶಕ್ತಿ ಈ ಸ್ಥಳಕ್ಕೆ ಇದೆ.

ವಿಶೇಷ ಸಂಗತಿ ಎಂದರೆ ಇತಿಹಾಸ ಪ್ರಸಿದ್ಧವಾದ ಸೆಪ್ಟೆಂಬರ್ ೧೧, ೧೮೯೩ರಲ್ಲಿ ಅಮೇರಿಕಾದ ಚಿಕಾಗೋ ನಗರದಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ಭಾರತದ ಸನಾತನ ಧರ್ಮದ ಪ್ರತಿನಿಧಿಯಾಗಿ ಭಾಗವಹಿಸಲು, ಸ್ವಾಮೀಜಿ ಮಹತ್ ಸಂಕಲ್ಪ ಮಾಡಿ ವ್ರತಧಾರಿಯಾದದ್ದು ಈ ಪುಣ್ಯ ಭೂಮಿ ಅನಾಥಾಲಯ-ನಿರಂಜನ ಮಠದ ಆವರಣದಲ್ಲಿಯೇ ಎಂಬುದು ಮೈಸೂರಿನ ಜನತೆಗೆ ಅಭಿಮಾನದ ಸಂಗತಿಯಾಗಿದೆ.

### ಸದ್ವಿದ್ಯಾ ಪಾಠಶಾಲೆಯಲ್ಲಿ ಉಪನ್ಯಾಸ

ಸ್ವಾಮೀಜಿಯವರು ಅನಾಥಾಲಯ-ನಿರಂಜನ ಮಠದಲ್ಲಿ ವಾಸ್ತವ್ಯವಿದ್ದ ಆ ದಿನಗಳಲ್ಲಿ, ತಾತಯ್ಯ ಮತ್ತು ಅಂಬಳೆ ಅಣ್ಣಯ್ಯ ಪಂಡಿತರ, ಹಲವು ಭಕ್ತರ ಭಕ್ತಿಯ ಕರೆಯ ಮೇರೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಸಂಸ್ಕೃತದಲ್ಲಿ ವೇದಾಂತದ ಮತ್ತು ಸಮಕಾಲೀನ ಸ್ಥಿತಿಗತಿಗಳನ್ನು ತಿಳಿಸುವ ವಿಚಾರ ಆಧರಿಸಿ ಉಪನ್ಯಾಸಗಳನ್ನು ನೀಡುತ್ತಿದ್ದರು. ಅದನ್ನು ಅಂಬಳೆ ಅಣ್ಣಯ್ಯ ಪಂಡಿತರು ಕನ್ನಡಕ್ಕೆ ಅನುವಾದಿಸಿ ಹೇಳುತ್ತಿದ್ದರು. ಇಂದಿಗೂ ಆ ಕೋಣೆಯನ್ನು ಸದ್ವಿದ್ಯಾ ಶಾಲೆಯಲ್ಲಿ ನೋಡಬಹುದು.

### ಸ್ವಾಮೀಜಿ ಹಾಗೂ ಮೈಸೂರಿನ ನಿಕಟ ಬಾಂಧವ್ಯ

ಕೆಲವು ದಿನಗಳಾದ ಮೇಲೆ ದಿವಾನರು ತರುಣ ಆಚಾರ್ಯರನ್ನು ಅರಮನೆಗೆ ಕರೆದುಕೊಂಡು ಹೋಗಿ, ಶ್ರೀ ಚಾಮರಾಜೇಂದ್ರ ಒಡೆಯರಿಗೆ ಪರಿಚಯ ಮಾಡಿಕೊಟ್ಟರು. ದೊರೆಗಳು ಕಾಷಾಯ ವಸ್ತ್ರಧಾರಿಯಾಗಿದ್ದ ಕುಮಾರ ಯೋಗಿಯನ್ನು ನೋಡಿ ಬಹಳ ಸಂತೋಷಪಟ್ಟರು. ಸ್ವಾಮೀಜಿಯ ತೇಜಸ್ಸಿಗೂ, ಸೂಕ್ಷ್ಮ ದೃಷ್ಟಿಗೂ, ಧರ್ಮ ಜೀವನಕ್ಕೂ ದೊರೆಗಳು ಮನಸೋತರು. ಸ್ವಾಮೀಜಿ ಬಳಿ ಮಹಾರಾಜರು ಅನೇಕ ಸಾರಿ ಬಹಳ ಹೊತ್ತಿನವರಿಗೆ ಸಂಭಾಷಣೆ ಮಾಡುತ್ತಿದ್ದರು, ಮೈತ್ರಿ ಪ್ರಬಲವಾಯಿತು. ರಾಜ್ಯವನ್ನು ಸಮೃದ್ಧಗೊಳಿಸಲು ಮತ್ತು ಪ್ರಜೆಗಳ ಅಭಿವೃದ್ಧಿಗೆ ಬೇಕಾದ ಹಲವಾರು ವಿಷಯಗಳನ್ನು ಕುರಿತಂತೆ ಸ್ವಾಮೀಜಿಯವರು ಮಹಾರಾಜರಿಗೆ ಮಾರ್ಗದರ್ಶನ ನೀಡಿದರು.

ಅರಮನೆಯಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ವಿಚಾರ ಸಭೆ ಕೂಡಿತು. ಆ ಸಭೆಗೆ ಸ್ವಾಮೀಜಿಗಳಿಗೂ ಆಹ್ವಾನ ಬಂದಿತು. ಮಹಾರಾಜರ ಕೋರಿಕೆಯಂತೆ ಸ್ವಾಮೀಜಿ ವೇದಾಂತದ ವಿಚಾರಗಳ ಅಂಶಗಳನ್ನು ಚರ್ಚಿಸಿದರು. ಮಹಾರಾಜರು ಸ್ವಾಮೀಜಿ ನನ್ನಿಂದ ಏನಾದರೂ ಸೇವೆಯನ್ನು ಸ್ವೀಕರಿಸುವುದಿಲ್ಲವೇ ಎಂದು ಕೇಳಿದರು. ಆಗ ಸ್ವಾಮೀಜಿ ಭರತಖಂಡದ ಸರ್ವತೋಮುಖವಾದ ದುರಾವಸ್ಥೆಯನ್ನು ವರ್ಣಿಸಿ ದೇಶವಿದೇಶಗಳಿಗೆ ಹೋಗಿ, ಸನಾತನ ಧರ್ಮದ ಜ್ಯೋತಿಯನ್ನು ಅರಳಿಸಿ, ತನ್ಮೂಲಕ ಸ್ವದೇಶಸೇವೆ ಮಾಡಬೇಕೆಂದಿರುವ ತಮ್ಮ ಸಂಕಲ್ಪವನ್ನು ತಿಳಿಸಿದರು. ಸ್ವದೇಶ ಕಲ್ಯಾಣವನ್ನು ಸಾಧಿಸಲು ತಮ್ಮಂಥ ಸತ್ಕುಲ ಪ್ರಸೂತರೂ, ಶಕ್ತಿಶಾಲಿಗಳೂ ಆದ ರಾಜರುಗಳು ಪ್ರಯತ್ನ ಪಟ್ಟರೆ, ಕಾರ್ಯ ಆರಂಭವನ್ನು ಮಾಡಬಹುದು; ಇದರಲ್ಲಿ ತಾವು ಮುಂದಾಳುಗಳಾಗಬೇಕೆಂಬುದೇ ನನ್ನ ಪ್ರಾರ್ಥನೆ ಎಂದು ಸ್ವಾಮೀಜಿ ತಿಳಿಸಿದರು. ಅದಕ್ಕೆ ಮಹಾರಾಜರು ಅಮೇರಿಕಾದ ಚಿಕಾಗೋದಲ್ಲಿ ನಡೆಯಲಿರುವ ಸರ್ವಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮದ ಪ್ರತಿನಿಧಿಗಳಾಗಿ ಸ್ವಾಮೀಜಿ ಭಾಗವಹಿಸಬೇಕೆಂದು ವಿನಂತಿಸಿದರು. ಜೊತೆಗೆ ಪಾಶ್ಚಾತ್ಯ ದೇಶಗಳಿಗೆ ಧರ್ಮ ಪ್ರಚಾರ ಮಾಡಲು ಹೋಗುವುದಾದರೆ ಸಂಪೂರ್ಣ ಖರ್ಚನ್ನು ತಾವೇ ವಹಿಸಿಕೊಳ್ಳುವುದಾಗಿ ಹೇಳಿದರು; ಒಂದೆರಡು ಸಾವಿರ ರೂಪಾಯಿಗಳನ್ನು ಕೊಡಲು ಸಿದ್ಧರಾದರು. ಸ್ವಾಮೀಜಿ ಅದನ್ನು ತೆಗೆದುಕೊಳ್ಳದೆ, ''ನಾನು ಈಗ ಪರಿವ್ರಾಜಕನಾಗಿ ಬಂದಿದ್ದೇನೆ. ಮುಂದೆ ಅಂಥ ಸಮಯ ಬಂದಾಗ ತಾವು ಸಹಾಯ ಮಾಡಬೇಕು'' ಎಂದು ತಿಳಿಸಿದರು.

ಮೈಸೂರಿನ ಜೊತೆಗೆ ತಮಗಿರುವ ಬಾಂಧವ್ಯ ಮತ್ತು ಆತ್ಮೀಯ ಸಂಬಂಧವನ್ನು ಸ್ವತಃ ಸ್ವಾಮೀಜಿಯವರೇ ತಮ್ಮ ಪತ್ರಗಳಲ್ಲಿ ದಾಖಲಿಸಿದ್ದಾರೆ. ದಿವಾನ್ ಶೇಷಾದ್ರಿ ಅಯ್ಯರ್ ಅವರಿಗೆ ಬರೆದ ಒಂದು ಪತ್ರದಲ್ಲಿ – 'ದಕ್ಷಿಣ ಭಾರತದ ಜನತೆಗೆ ನಾನು ಅತ್ಯಂತ ಚಿರಋಣಿ ಅದರಲ್ಲೂ ಸಿಂಹಪಾಲು ಮೈಸೂರಿಗೆ ಸಲ್ಲುತ್ತದೆ, ಧನ್ಯವಾದಗಳು' ಎಂದು ಸ್ವಾಮಿ ವಿವೇಕಾನಂದರು ಬರೆದಿದ್ದಾರೆ.

To the Honourable Sir Seshadri Iyer,

Dear Sir

To the people of Southern India I owe much and not a small part of that to Mysore.. May Sankara keep you in health and may his blessings be on you and yours for ever and ever

Is the sincere prayer of

Vivekananda

ಮಹಾರಾಜರ ಘನವಾದ ಉದ್ದೇಶಗಳು ಈಡೇರಲಿ, ಅದಕ್ಕಾಗಿ ಪರಿಶ್ರಮಿಸಲು 'ಮಹಾದೇವ ಶಂಕರ'ನು ನಿಮಗೆ ಆರೋಗ್ಯ ನೀಡಿ ಅನುಗ್ರಹಿಸಲಿ ಎಂದು ನಿರಂಜನ ಮಠದ ಶಿವ ದೇಗುಲವನ್ನು ಸ್ಮರಿಸುತ್ತಾ ಶೇಷಾದ್ರಿ ಅಯ್ಯರ್ ಅವರಿಗೆ ತಮ್ಮ ಪತ್ರದಲ್ಲಿ ಆಶೀರ್ವದಿಸಿದ್ದಾರೆ. ಸ್ವಾಮಿ ವಿವೇಕಾನಂದರ ಬೇರೆ ಯಾವುದೇ ಪತ್ರದಲ್ಲಿ ಮಹಾದೇವ ಶಂಕರನನ್ನು ಈ ರೀತಿ ವಿಶೇಷವಾಗಿ ಸ್ಮರಿಸಿರುವುದು ನಮಗೆ ಕಂಡುಬರುವುದಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಈ ಸಂಗತಿಗಳು ಮೈಸೂರಿನೊಂದಿಗೆ ಸ್ವಾಮಿ ವಿವೇಕಾನಂದರಿಗಿದ್ದ ಬಾಂಧವ್ಯವನ್ನು ಸೂಚಿಸುತ್ತದೆ.

### ಮೈಸೂರಿನಲ್ಲಿ ಸ್ವಾಮೀಜಿಯವರ ಸುತ್ತಾಟ

ವಿವೇಕಾನಂದರ ಭೇಟಿ ಕೇವಲ ಅರಮನೆ ಮಹಾರಾಜರಿಗೆ ಸೀಮಿತವಾಗಿರದೆ, ವಿರಾಮದ ವೇಳೆಯಲ್ಲಿ ಸ್ವಾಮೀಜಿಯವರು ಬೆಟ್ಟದ ಮೇಲಿರುವ ತಾಯಿ ಚಾಮುಂಡೇಶ್ವರಿಯ ದರ್ಶನವನ್ನು ಮಾಡಿದರು. ಪಕ್ಕದ ಕೃಷ್ಣವಿಲಾಸ ರಸ್ತೆಯಲ್ಲಿ ಸಂಚಾರ ಮಾಡುತ್ತಿದ್ದರು. ಅಲ್ಲಿಗೆ ಸಮೀಪದಲ್ಲಿರುವ ಪುರಾತನ ಶ್ರೀ ಸುಬ್ಬರಾಯದಾಸರ ಪ್ರಸನ್ನ ವೆಂಕಟರಮಣ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸ್ವಾಮೀಜಿ ಭೇಟಿ ನೀಡಿದ್ದರು ಎಂದು ಅಲ್ಲಿನ ವೃದ್ಧ ಅರ್ಚಕರು ಒಬ್ಬರು ತಾವು ಹಿರಿಯರಿಂದ ಕೇಳಿ ತಿಳಿದ ತಮ್ಮ ಅನುಭವವನ್ನು ಸ್ಮರಿಸಿ ಹೇಳಿದ್ದಾರೆ.

ಅಬ್ದುಲ್ ರೆಹಮಾನ್ ಸಾಹೇಬ್ ಎಂಬ ಚುನಾಯಿತ ಮುಸಲ್ಮಾನ ಜನಪ್ರತಿನಿಧಿಯನ್ನು ಭೇಟಿ ಮಾಡಿ ಆತನೊಡನೆ ಸಂಭಾಷಣೆ ನಡೆಸಿ ಸ್ವಾಮೀಜಿಯವರು ಕುರಾನಿನ ಬಗ್ಗೆ ನಿರರ್ಗಳವಾಗಿ ಮಾತನಾಡಿ ಆತನನ್ನು ದಂಗುಬಡಿಸಿದರು.ಅಲ್ಲದೆ ಆಸ್ಥಿಯಾದ ಸಂಗೀತಗಾರನೊಬ್ಬನನ್ನು ವಿವೇಕಾನಂದರು ಭೇಟಿ ಮಾಡಿ ಆತನೊಡನೆ ಚರ್ಚಿಸುತ್ತಾ , ಪಾಶ್ಚಾತ್ಯ ಸಂಗೀತದ ಕುರಿತು ಆತನಿಗೆ ಸಾಕಷ್ಟು ಮಾಹಿತಿಯನ್ನು ತಿಳಿಸಿಕೊಟ್ಟರು. ತಮಗೆ ಬೇಕಾದ ವಸ್ತುವೊಂದನ್ನು ಕೂಡ ಖರೀದಿಸಿದ್ದರು ಎಂಬ ಮಾಹಿತಿ ಕೂಡ ಇದೆ.

೧೮೯೪ ಜೂನ್ ತಿಂಗಳಲ್ಲಿ ಮೈಸೂರಿನ ಮಹಾರಾಜ ಚಾಮರಾಜ ಒಡೆಯರಿಗೆ ಚಿಕಾಗೋನಿಂದ ಸ್ವಾಮಿ ವಿವೇಕಾನಂದರು ಬರೆದ ಪತ್ರದ ಕನ್ನಡ ಅನುವಾದ:

‘‘ನನ್ನ ನೆಚ್ಚಿನ ಮಹಾರಾಜ

ಜೀವನ ಕ್ಷಣಿಕವಾದದು; ಜಗತ್ತಿನ ಭೋಗಗಳು ತಾತ್ಕಾಲಿಕವಾದವುಗಳು. ಆದರೆ ಯಾರು ಇತರರಿಗಾಗಿ ಬದುಕುತ್ತಾರೋ, ಅವರು ನಿಜವಾಗಿಯೂ ಬದುಕಿದಂತೆ; ಉಳಿದವರು ಬದುಕಿದ್ದರೂ ಸತ್ತಂತೆಯೇ. ಉದಾತ್ತ ಮನಸ್ಕರಾದ ಭಾರತಮಾತೆಯ ಶ್ರೇಷ್ಠ ಪುತ್ರರಾದ ನಿಮ್ಮಂಥವರು, ಆಕೆಯು ಮೇಲೆದ್ದು ನಿಲ್ಲಲು ಬಹಳಷ್ಟು ನೆರವಾಗಬಲ್ಲಿರಿ, ಭಾರತದ ಇಂದಿನ ದುರ್ಗತಿಗೆ ದಾರಿದ್ರವೇ ಕಾರಣ. ಜನಸಾಮಾನ್ಯರಿಗೆ ಶಿಕ್ಷಣ ನೀಡಿ, ನಷ್ಟವಾದ ಅವರ ವ್ಯಕ್ತಿತ್ವವನ್ನು ಅವರಿಗೆ ಮರಳಿ ದೊರಕಿಸಿಕೊಡುವುದು ನಮ್ಮ ಪ್ರಥಮ ಕರ್ತವ್ಯ. ಅಜ್ಞಾನದಲ್ಲಿ ಮುಳುಗಿರುವ ಕೋಟ್ಯಂತರ ದೀನ – ಆರ್ತ ಭಾರತೀಯರಿಗೆ ತಮ್ಮ ಆ ಉದಾತ್ತ ಹೃದಯ ತೀವ್ರವಾಗಿ ಮಿಡಿಯಲಿ ಎಂದು ಪ್ರಾರ್ಥಿಸುವ...

— ವಿವೇಕಾನಂದ’’

### ‘ನಮ್ಮ ಅತಿ ದೊಡ್ಡ ಭರವಸೆಗಳಲ್ಲಿ ಒಬ್ಬರಾದ ಮೈಸೂರು ಮಹಾರಾಜರು ಇನ್ನಿಲ್ಲ...’

ಇದು ೧೮೯೪ ಡಿಸೆಂಬರ್‌ನಲ್ಲಿ ಅಕಾಲಿಕವಾಗಿ ಮೃತ್ಯುವಶರಾದ ಮಹಾರಾಜ ಚಾಮರಾಜ ಒಡೆಯರಿಗೆ ವಿವೇಕಾನಂದರು ಸಲ್ಲಿಸಿದ ಶ್ರದ್ಧಾಂಜಲಿಯ ವಾಕ್ಯ. ಮಹಾರಾಜರ ನಿಧನದ ಸುದ್ದಿ ತಿಳಿದು ಅಂದಿನ ಮದ್ರಾಸಿನ ಶಿಷ್ಯ ಅಳಸಿಂಗ ಪೆರುಮಾಳರಿಗೆ ಬರೆದ ಪತ್ರದಲ್ಲಿ ಸ್ವಾಮಿ ವಿವೇಕಾನಂದರು ಈ ಭಾವಪೂರ್ಣ ವಾಕ್ಯವನ್ನು ಉಲ್ಲೇಖಿಸಿದ್ದಾರೆ.



ತಾತಯ್ಯನವರು (೧೮೪೪-೧೯೩೩)

### ಅನಾಥಾಲಯ ಅಥವಾ ನಿರಂಜನ ಮಠದ ಹಿನ್ನೆಲೆ

೧೯ನೇ ಶತಮಾನದ ಪೂರ್ವ ಭಾಗದಲ್ಲಿ ಶ್ರೀ ನಂಜುಂಡ ಭಗವಾನ್ ಎಂಬ ಅವಧೂತರು ಅನಾಥಾಲಯವಿದ್ದ ಸ್ಥಳದಲ್ಲಿ ವಾಸಿಸುತ್ತಿದ್ದರು. ಇವರು ಆಧ್ಯಾತ್ಮಿಕತೆಯ ಅತಿ ಉನ್ನತ ಅವಸ್ಥೆಯಲ್ಲಿ ಇದ್ದರು. ಇಂಥವರನ್ನು ಸಾಮಾನ್ಯವಾಗಿ ಸ್ಥಿತಪ್ರಜ್ಞರು, ಅವಧೂತರು, ನಿರಂಜನರು ಎನ್ನುತ್ತಾರೆ. ನಿರಂಜನ ಎಂದರೆ ಯಾವುದೇ ದೋಷಗಳಿಲ್ಲದ, ಯಾವುದೇ ಅಂಜನ ಅಂಟು, ಮಾಲಿನ್ಯಗಳಿಲ್ಲದ ಮಾನಸಿಕ ಉನ್ನತ ಅವಸ್ಥೆಯನ್ನು ಹೊಂದಿರುವವರು. ನಂಜುಂಡ ಭಗವಾನರನ್ನು ನಿರಂಜನ ಸ್ವಾಮಿಗಳೆಂದು ಕೂಡ ಜನರು ಕರೆಯುತ್ತಿದ್ದರು. ಬಹುತೇಕ ನಿರಂಜನ ಸ್ವಾಮಿಗಳು ವಾಸಿಸುತ್ತಿದ್ದ ಸ್ಥಳವನ್ನೇ ಜನರು ಕಾಲಾಂತರದಲ್ಲಿ ‘ನಿರಂಜನ ಮಠ’ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಇವರು ತಮ್ಮ ಜೊತೆಯಲ್ಲಿ ಕೆಲವು ಅನಾಥ ಮಕ್ಕಳನ್ನು ಕೂಡ ಸಾಕಿದ್ದರು. ಇವರ ಬಳಿಯಲ್ಲಿ ಸ್ವಾಮಿ ವಿಶ್ವೇಶ್ವರಾನಂದ ಸರಸ್ವತಿ ಎಂಬ ಶಿಷ್ಯರಿದ್ದರು. ಈ ವಿಶ್ವೇಶ್ವರಾನಂದ ಸರಸ್ವತಿಗಳು ಶಂಕರ ಸಂಪ್ರದಾಯದ ಯತಿಗಳಾಗಿದ್ದರು. ಇವರು ತಮ್ಮ ಗುರುಗಳ ಆದೇಶದಂತೆ ಅನಾಥ ಮಕ್ಕಳಿಗೆ ನೆರವನ್ನು ನೀಡುತ್ತಾ, ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಮಕ್ಕಳಿಗೆ ಬೇಕಾದ ಆಹಾರಕ್ಕಾಗಿ ಮನೆಮನೆಗಳಿಗೂ ಹೋಗಿ ದಿನಸಿಗಳನ್ನು ಭಿಕ್ಷೆ ಬೇಡಿ ತಂದು ಅನಾಥಾಲಯವನ್ನು ನಿರ್ವಹಿಸುತ್ತಿದ್ದರು. ಕಾಲಾಂತರದಲ್ಲಿ ಅನಾಥಾಲಯದ ಒಡನಾಟ ಇಟ್ಟುಕೊಂಡಿದ್ದ ಶ್ರೀ ಎಂ ವೆಂಕಟಕೃಷ್ಣಯ್ಯ (ತಾತಯ್ಯ) , ಶ್ರೀ ಕೆ ಚಂದ್ರಶೇಖರಯ್ಯ, ಶ್ರೀ ಎಸ್ ಕೃಷ್ಣರಾವ್ ಮತ್ತು ಡಾಕ್ಟರ್ ಆರ್ಮುಗಂ ಮೊದಲಿಯಾರ್ ಮೊದಲಾದ ನಂಬಿಕಸ್ಥರಿಗೆ ಅನಾಥಾಲಯದ ಜವಾಬ್ದಾರಿಯನ್ನು ವಹಿಸಿ

ದರು. ಸ್ವಾಮಿ ವಿಶ್ವೇಶ್ವರಾನಂದ ಸರಸ್ವತಿಗಳು ಸನಾತನ ಧರ್ಮ ಪ್ರಚಾರಕ್ಕಾಗಿ ಉತ್ತರ ಭಾರತದ ಕಡೆಗೆ ಪ್ರವಾಸ ಹೋದವರು, ಮಾರ್ಗ ಮಧ್ಯದಲ್ಲಿ ದೈವಾಧೀನರಾದರು. ಅನಾಥಾಲಯದ ಸಂಪೂರ್ಣ ಹೊಣೆ ತಾತಯ್ಯನವರ ಹೆಗಲಿಗೆ ಬಂತು. ೧೯೪೬ ರಲ್ಲಿ ನಂಜುಂಡ ಭಗವಾನರ ಹೆಸರಲ್ಲಿ 'ದಿ ಅನಾಥಾಲಯ ಟ್ರಸ್ಟ್' ರಿಜಿಸ್ಟರ್ ಆಯಿತು. ಇದರ ಟ್ರಸ್ಟಿಗಳು ತಾತಯ್ಯನವರ ನೇತೃತ್ವ ದಲ್ಲಿ ಅನಾಥ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ನಂತರ ಈ ನಿರಂಜನ ಮಠದ ಸಂಪೂರ್ಣ ಜವಾಬ್ದಾರಿ ಟ್ರಸ್ಟಿಗೆ ವಹಿಸಲ್ಪಟ್ಟಿತು ೧೯೫೪ರಲ್ಲಿ ಶೈಕ್ಷಣಿಕ ಉದ್ದೇಶಗಳಿಗೋಸ್ಕರ ಅಂದಿನ ಸರ್ಕಾರವು ಸಂಪೂರ್ಣ ಜಾಗವನ್ನು ತನ್ನ ವಶಕ್ಕೆ ಪಡೆದುಕೊಂಡು, ಅನಾಥಾ ಲಯದ ಟ್ರಸ್ಟಿಗೆ ಸುಬ್ಬರಾಯನ ಕೆರೆಯ ಬಳಿ ಇರುವ ೮,೩೯೪ ಚದುರ ಯಾರ್ಡ್ಸ್ ಜಾಗವನ್ನು ಪರ್ಯಾಯವಾಗಿ ನೀಡಿತು. ೧೯೫೪ರಿಂದ ೨೦೧೩ರವರೆಗೆ ಸ್ವಾಮಿ ವಿವೇಕಾನಂದರು ನೆಲೆಸಿದ್ದ ನೆಲವು ಪಾಳುಬಿದ್ದು ಕಸದ ತೊಟ್ಟಿಯಾಗಿತ್ತು.

೧೯೫೪ರಿಂದ ೨೦೧೩ರವರೆಗೆ ಸ್ವಾಮಿವಿವೇಕಾನಂದರು ನೆಲೆ ಸಿದ್ದ ಆವರಣದಲ್ಲಾದ ಬೆಳವಣಿಗೆಗಳು: ೧೯೫೪ರಲ್ಲಿ ಶೈಕ್ಷಣಿಕ ಉದ್ದೇಶ ಗಳಿಗೋಸ್ಕರ ಅಂದಿನ ಅನಾಥಾಲಯ ಜಾಗವನ್ನು ಸರ್ಕಾರವು ಸಂಪೂರ್ಣ ತನ್ನ ವಶಕ್ಕೆ ಪಡೆದುಕೊಂಡಿತು. ಈ ಆವರಣದ ಎದು ರಲ್ಲಿದ್ದ ಮಹಾರಾಣಿ ಕಾಲೇಜಿನ ಆವರಣದಲ್ಲಿದ್ದ 'ಮಹಾರಾಣಿ ಬಾಲಿಕ ಶಾಲೆ' (ಎನ್.ಟಿ.ಎಂ.ಶಾಲೆ) ಯನ್ನು ಸ್ವಾಮಿ ವಿವೇಕಾ ನಂದರು ತಂಗಿದ್ದ ಆವರಣಕ್ಕೆ ಸಾಧಾರಣ ಕಟ್ಟಡ ಕಟ್ಟಿ ವರ್ಗಾಯಿ ಸಿತು. ಮಹಾರಾಣಿ ಎನ್. ಟಿ. ಎಂ. ಶಾಲೆಯು ನಡೆಯುತ್ತಿತ್ತು. ೧೯೫೩ರ ಹೊತ್ತಿಗೆ ಆ ಕಟ್ಟದ ಶಿಥಿಲಗೊಂಡಿತ್ತು. ಆ ಶಾಲೆಯ ಕಟ್ಟಡವು ಬಳಸಲು ಯೋಗ್ಯವಾಗಿಲ್ಲವೆಂದು ಅಂದಿನ ಲೋಕೋಪ ಯೋಗಿ ಇಲಾಖೆ ಮತ್ತು ಶಿಕ್ಷಣ ಇಲಾಖೆಯವರು ಪರಿಶೀಲನೆ ನಡೆಸಿ, ಸರ್ಕಾರಕ್ಕೆ ತಿಳಿಸಿದರು. ಆ ವೇಳೆಗೆ ಧರ್ಮ ರತ್ನಾಕರ ನಂದಿ ಬಸಪ್ಪನವರ ಕಟ್ಟಡಕ್ಕೆ ಎನ್. ಟಿ. ಎಂ. ಶಾಲೆಯು ಅನಿವಾರ್ಯ ವಾಗಿ ಸ್ಥಳಾಂತರಗೊಂಡಿತು. ಇದು ದಿವಾನ್ ರಸ್ತೆಯಲ್ಲಿದೆ. ಈ ಸಂದರ್ಭದಲ್ಲಿ ಎನ್.ಟಿ. ಎಂ. ಶಾಲೆಯ ಸೇವಕರ ಕ್ವಾರ್ಟರ್ಸ್ ಒಂದನ್ನು ಅನಧಿಕೃತವಾಗಿ ಪಡೆದುಕೊಂಡ ಶಂಭುಲಿಂಗ ಸ್ವಾಮಿ ಎಂಬವರು ಮಹಾರಾಜ ಪ್ರೌಢ ಶಾಲೆಯಲ್ಲಿ ಸಂಸ್ಕೃತ ಶಿಕ್ಷಕ ರಾಗಿದ್ದು , ಉನ್ನತ ವ್ಯಾಸಂಗಕ್ಕಾಗಿ ಮಾನಸ ಗಂಗೋತ್ರಿಯಲ್ಲಿ ಸ್ನಾತಕೋತ್ತರ ಸಂಸ್ಕೃತ ಪದವಿಗಾಗಿ ಅಧ್ಯಯನ ಮಾಡುತ್ತಿದ್ದರು. ಅನಧಿಕೃತವಾಗಿ ನೆಲೆಸಿದ ಶಂಭುಲಿಂಗ ಅವರು ನಂತರ ನಿರಂಜನ ಮಠದ ಜಾಗವನ್ನು ಅತಿಕ್ರಮಿಸಿ, ಅದು ತಮ್ಮದೇ ಜಾಗವೆಂದು ವರ್ತಿಸತೊಡಗಿದರು. ಶಾಲಾ ಕಟ್ಟಡದ ಕಾಮಗಾರಿ ಮತ್ತು ನಿರ್ಮಾಣವನ್ನು ಮಾಡಬೇಕೆಂದು ಲೋಕೋಪಯೋಗಿ ಇಲಾಖೆ ಮತ್ತು ಶಿಕ್ಷಣ ಇಲಾಖೆ ಆಯೋಜಿಸಿದಾಗ, ಆ ಜಾಗದಲ್ಲಿ ತನ್ನ ಶಾಂತಿ ಯುತವಾದ ಸ್ವಾಮ್ಯಕ್ಕೆ ಅಡ್ಡಿಯಾಗುತ್ತದೆ ಎಂದು ಶಂಭುಲಿಂಗ ಸ್ವಾಮಿ ನ್ಯಾಯಾಲಯದಲ್ಲಿ ದಾವೆ ಹೂಡಿ ಪ್ರಗತಿಪರ ಕಾಮ ಗಾರಿಗೆ ತಡೆಯನ್ನು ತಂದರು. ಕ್ರಮೇಣ ನ್ಯಾಯಾಲಯದಲ್ಲಿ ಮೊಕದ್ದಮೆಯು ನಡೆದು, ಈತನ ತಡೆಯಾಜ್ಞೆಯು ಊರ್ಜಿತ ವಾಗಲಿಲ್ಲ. ಅದು ಸರ್ಕಾರಿ ಜಾಗವಾದ ಕಾರಣ ಆತನಿಗೂ ಆ ಸ್ಥಳಕ್ಕೂ ಯಾವುದೇ ಸಂಬಂಧವಿಲ್ಲವೆಂದು ಶಂಭುಲಿಂಗ ಸ್ವಾಮಿಯ ದಾವೆಯನ್ನು ಮೈಸೂರಿನ ಎರಡನೆಯ ಅಡಿಷನಲ್ ಒಂದನೇ ಮುನ್‌ಸೀಫ್ ನ್ಯಾಯಾಲಯವು ೧೯೭೧ರಲ್ಲಿ ದಂಡ ಶುಲ್ಕ ದೊಂದಿಗೆ ವಜಾ ಮಾಡಿತು. ಹಾಗೂ ಈ ಜಾಗವನ್ನು ತೆರವು ಮಾಡಬೇಕೆಂದು ತೀರ್ಪು ನೀಡಿತು. ೧೯೭೧ರ ಉಪ ಆಯುಕ್ತರ ಪತ್ರವನ್ನು ನೋಡಿದಾಗ ಅನಧಿಕೃತ ನಿವಾಸಿಯಾದ ಶಂಭುಲಿಂಗ ಸ್ವಾಮಿಯು ಸರ್ಕಾರದ ಸೊತ್ತನ್ನು ಅತಿಕ್ರಮಿಸಿಕೊಂಡಿದ್ದು, ಆತನಿಗೆ ಮುಂದುವರಿಯಲು ಯಾವ ಅಧಿಕಾರವೂ ಇರುವುದಿಲ್ಲ ; ಸಂಪೂರ್ಣ ಜಾಗವೂ ಶಿಕ್ಷಣ ಇಲಾಖೆಗೆ ಸೇರಿದೆ ಎಂದು ತಿಳಿಸ ಲಾಗಿದೆ. ಶ್ರೀ ಅನ್ನದಾನೇಶ್ವರ ಮಠ ಅವರಿಗೆ ಜಾಗವನ್ನು ತೆರವು ಗೊಳಿಸಲು ನೋಟಿಸ್ ನೀಡಿದ್ದು, ಅನಧಿಕೃತ ನಿವಾಸಿಯಾದ ಶಂಭುಲಿಂಗ ಸ್ವಾಮಿ ಅಲಿಯಾಸ್ ಶಿವಾನಂದ ಸ್ವಾಮಿಯನ್ನು ರೆವಿನ್ಯೂ ಮತ್ತು ಪೊಲೀಸ್ ಅಧಿಕಾರಿಗಳ ಸಹಾಯದಿಂದ ೧೯೭೧ ರಂದು ಹೊರಗೆ ಕಳಿಸಲಾಗಿದೆ. ನಂತರ ಕೆಲ ದಿನಗಳಲ್ಲಿ ನಿರಂಜನ ಮಠದ ಜಾಗವು ಕ್ರಮೇಣ ಪಾಳುಬಿದ್ದು, ಅದು ಅಲ್ಲಿನ ನಿವಾಸಿ ಗಳು ಮತ್ತು ವ್ಯಾಪಾರಸ್ಥರು ಕಸವನ್ನೆಲ್ಲ ಹಾಕುವ ಕೊಳಕು ಪ್ರದೇಶ ವಾಗಿತ್ತು. ಅದು ಯಾವುದೇ ಪಾವಿತ್ರ್ಯವನ್ನು ಕಾಪಾಡಿಕೊಂಡಿರದೆ ಜನರ ನಿರ್ಲಕ್ಷಕ್ಕೆ ಒಳಗಾಗಿತ್ತು. ೧೯೭೨ ಇಸವಿಯಿಂದ ೨೦೦೮ ನೇ ಇಸವಿಯವರೆಗೂ ಅದು ಪಾಳುಬಿದ್ದಿತ್ತು. ಕೆ. ಎಸ್. ನಾರಾಯಣ ಸ್ವಾಮಿ ಅವರು ೧೯೯೨ರಲ್ಲಿ ಪ್ರಜಾವಾಣಿಗೆ ಬರೆದ ಪತ್ರವು ಸ್ವಾಮಿ ವಿವೇಕಾನಂದರು ನೆಲೆಸಿದ್ದ ಜಾಗದ ಬಗ್ಗೆ ಅರಿವು ಮೂಡಿಸಿತು.

ನಿರಂಜನ ಮಠದ ಜಾಗವನ್ನು ಮೈಸೂರು ಮಹಾನಗರ ಪಾಲಿಕೆ ಸ್ವಚ್ಛಗೊಳಿಸಿ ಸುಸ್ಥಿತಿಗೆ ತಂದಿತು.

ಸ್ವಾಮಿ ವಿವೇಕಾನಂದರು ನೆಲೆಸಿದ್ದ ಜಾಗದ ಬಗ್ಗೆ ಅರಿವು ಮೂಡಿಸಿದ ಕೆ. ಎಸ್. ನಾರಾಯಣಸ್ವಾಮಿ ಅವರು ಪ್ರಜಾವಾಣಿಗೆ ಬರೆದ ಪತ್ರದ ಆಶಯ ಹೀಗಿದೆ:

ದಿನಾಂಕ೬.೧೨. ೧೯೯೨ ರಂದು ಪ್ರಜಾವಾಣಿಗೆ ಬರೆದ ತಮ್ಮ ಪತ್ರದಲ್ಲಿ ಶ್ರೀ ಕೆ.ಎಸ್. ನಾರಾಯಣಸ್ವಾಮಿ ಎಂಬ ಮೈಸೂರಿನ ಹಿರಿಯ ನಾಗರಿಕರು ತಮ್ಮ ಸ್ಮೃತಿಯಿಂದ ಸ್ವಾಮೀಜಿಯವರು ಮೈಸೂರಿನ ಹಾಗೂ ನಿರಂಜನ ಮಠದ ಭೇಟಿಗೆ ಪೂರಕವಾದ ವಿಷಯಗಳನ್ನು ದಾಖಲಿಸಿದ್ದಾರೆ. ಜೊತೆಗೆ ಶ್ರೀಯುತ ಡಿ. ರಾಮಯ್ಯ ಎಂಬ ಹಿರಿಯ ಗಾಂಧಿವಾದಿಗಳು ಸ್ವಾಮಿ ವಿವೇಕಾ ನಂದರ ನಿರಂಜನದ ಮಠದ ವಾಸ್ತವ್ಯವನ್ನು ದೃಢೀಕರಿಸಿದ್ದರು ಎಂದು ತಿಳಿಸಿದ್ದಾರೆ. ಕಾಲಾಂತರದಲ್ಲಿ ಅನಾಥಾಲಯವನ್ನು ಹೊಸ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಆಮೇಲೆ ನಿರಂಜನ ಮಠದ ಆವರಣವು ಪಾಳುಬಿದ್ದು ಹೋಗಿತ್ತು. ಅನೇಕ ವರ್ಷಗಳ ನಂತರ ಈಗಿನ ಶಾಲಾ ಕಟ್ಟಡ (NTMS) ನಿರ್ಮಾಣವಾಯಿತು. ಮೈಸೂರು ಪುರಸಭಾ ಅಧ್ಯಕ್ಷರಾಗಿದ್ದ ಶ್ರೀ ವೆಂಕಟರಮಣಯ್ಯ ನವರು ಮತ್ತು ನಾ.ಭದ್ರಯ್ಯನವರು ಕೆ. ಎಸ್. ನಾರಾಯಣ ಸ್ವಾಮಿ ಮೊದಲಾದವರು ನಿರಂಜನ ಮಠದ ಆವರಣದಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕ, ಪ್ರಾರ್ಥನಾ ಮಂದಿರ ನಿರ್ಮಾಣವಾಗ

ಬೇಕೆಂದು ಪ್ರಾರ್ಥಿಸಿದ್ದರು ಎಂದು ಕೆ. ಎಸ್. ನಾರಾಯಣಸ್ವಾಮಿಯವರು ಪ್ರಜಾವಾಣಿ ಪತ್ರದಲ್ಲಿ ತಿಳಿಸಿದ್ದಾರೆ. ಶ್ರೀ ಟಿ. ವೆಂಕಟರಮಣಯ್ಯ ಮತ್ತು ನಾ. ಭದ್ರಯ್ಯನವರು ಸರ್ಕಾರದೊಡನೆ ಸ್ಮಾರಕ ನಿರ್ಮಿಸುವ ನಿರ್ಮಿಸುವ ಬಗ್ಗೆ ಸ್ವಲ್ಪಕಾಲ ಪತ್ರ ವ್ಯವಹಾರ ಮಾಡಿದ್ದರು; ಆದರೆ ಅದು ಸಫಲವಾಗಲಿಲ್ಲ. ಶೇಷಾದ್ರಿ ಭವನದ ಮತ್ತು ಅದರ ಹಿಂದಿನ ನಿರಂಜನ ಮಠವನ್ನು ಸೇರಿಸಿ ಅಲ್ಲಿನ ಜಾಗದಲ್ಲಿ ವಿವೇಕಾನಂದ ಸ್ಮಾರಕ ಮಂದಿರ ನಿರ್ಮಾಣವಾಗಬೇಕೆಂದು ಹಲವು ನಾಗರಿಕರು ಬಹಳ ಹಿಂದೆಯೇ ಮನವಿ ಮಾಡಿದ್ದೂ ಉಂಟು. ಶೇಷಾದ್ರಿ ಭವನ ಕೇವಲ ಸರ್ಕಾರಿ ಕಚೇರಿಯಾಗಿರುವುದು ನಮಗೆ ಖೇದವೆನಿಸುತ್ತದೆ. ಈಗಲೂ ಸ್ಮಾರಕ ನಿರ್ಮಿಸುವ ಬಗ್ಗೆ ಮೈಸೂರಿನ ಮಹಾನಗರ ಪಾಲಿಕೆ ಆಲೋಚಿಸಿ ಸ್ವಾಮಿ ವಿವೇಕಾನಂದರ ಜೀವನ ಆದರ್ಶಗಳನ್ನು ಬರಲಿರುವ ಪೀಳಿಗೆಗೆ ಬೋಧಿಸಿ ಶಿಕ್ಷಣ ನೀಡುವಂತೆ ಸೂಕ್ತ ಸಂಸ್ಥೆಯೊಂದನ್ನು ನಿರ್ಮಿಸುವುದಾದರೆ ಮೈಸೂರಿನಲ್ಲಿ ನಡೆಯುತ್ತಿರುವ ಸ್ವಾಮಿ ವಿವೇಕಾನಂದರ ಭೇಟಿಯ ಶತಮಾನೋತ್ಸವಕ್ಕೆ ಕಳಶವಿಟ್ಟಂತೆ ಆಗುತ್ತದೆ ಎಂದು ಕೆ. ಎಸ್. ನಾರಾಯಣಸ್ವಾಮಿ ಅವರು ೧೯೯೨ರಲ್ಲಿ ಪ್ರಜಾವಾಣಿಗೆ ಬರೆದ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

### ಮೈಸೂರಿನ ರಾಮಕೃಷ್ಣ ಆಶ್ರಮದ ಭಕ್ತರ ಗುಂಪು

ಕೆ. ಎಸ್. ನಾರಾಯಣಸ್ವಾಮಿ ಅವರು ಪ್ರಜಾವಾಣಿಗೆ ಬರೆದ ಪತ್ರದ ಸಂಚಲನದಿಂದ ೧೯೯೨ ರಲ್ಲಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಆಗಮಿಸಿ ಅಂದು ಅನಾಥಾಲಯವಾಗಿದ್ದ ನಿರಂಜನ ಮಠದಲ್ಲಿ ವಾಸ್ತವ್ಯಹೂಡಿದ್ದ ಆವರಣವು ಪಾಳು ಬಿದ್ದಿದೆ ಎಂಬ ವಿಷಯ ವ್ಯಾಪಕವಾಗಿ ಹರಡಿತು. ಮಾಹಿತಿಯನ್ನು ತಿಳಿದ ಮೈಸೂರಿನ ರಾಮಕೃಷ್ಣ ಆಶ್ರಮದ ಭಕ್ತರ ಗುಂಪು ಅದರ ಪಾವಿತ್ರ್ಯಕ್ಕೆ ಮಹಾನಗರ ಪಾಲಿಕೆಯೊಂದಿಗೆ ಶ್ರಮಿಸಿದರು. ಸ್ಥಳೀಯ ಕಾರ್ಪೊರೇಟರ್‌ಗಳು ಮತ್ತು ಇತರ ನಾಯಕ ಗಣ್ಯರುಗಳಿಂದ ಸ್ಫೂರ್ತಿ, ಸಹಕಾರ ಪಡೆದು ಈ ಯೋಜನೆಗಾಗಿ ಪಾಳುಬಿದ್ದ ಜಾಗವನ್ನು ಅಭಿವೃದ್ಧಿಪಡಿಸಲು ಮೈಸೂರು ನಗರಪಾಲಿಕೆಯಿಂದ ೨೫ ಲಕ್ಷ ರೂಪಾಯಿಗಳ ಅನುದಾನ ಮಂಜೂರಾಯಿತು. ಶ್ರೀ ರಾಮಕೃಷ್ಣ ಆಶ್ರಮದ ಸಹಯೋಗದೊಂದಿಗೆ ಸ್ವಾಮಿ ವಿವೇಕಾನಂದರು ತಂಗಿದ್ದ ಆವರಣವು ಸ್ವಚ್ಛವಾಯಿತು. ಹೀಗಾಗಿ ಸಮಾಜದ ಕೆಲವು ಗಣ್ಯರು ಮತ್ತು ಮೈಸೂರಿನ ಕಾರ್ಪೊರೇಟರ್‌ಗಳು ಈ ಸ್ಥಳವನ್ನು ಸ್ವಚ್ಛ ಮಾಡುವ ಮತ್ತು ವಿವೇಕಾನಂದ ಯುವ ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಂಡರು.

### ಸರ್ಕಾರಗಳ ಆದೇಶಗಳು

ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮೋತ್ಸವದ ಆಚರಣೆಯ ಅಂಗವಾಗಿ ರಾಷ್ಟ್ರದಲ್ಲಿ ಸ್ವಾಮಿ ವಿವೇಕಾನಂದರು ತಂಗಿದ್ದ ಸ್ಥಳಗಳನ್ನು ಗುರುತಿಸಿ ಸ್ಮಾರಕಗಳನ್ನು ನಿರ್ಮಿಸಬೇಕೆಂದು ಅಂದಿನ ಪ್ರಧಾನಮಂತ್ರಿ ಸನ್ಮಾನ್ಯ ಶ್ರೀ ಮನಮೋಹನ್ ಸಿಂಗ್, ಶ್ರೀಮತಿ ಸೋನಿಯಾ ಗಾಂಧಿ, ಶ್ರೀ ಎ.ಕೆ.ಆ್ಯಂಟನಿ ಮುಂತಾದವರನ್ನು ಒಳಗೊಂಡ ಉನ್ನತ ನಿಯೋಗದ ಮೂಲಕ ಕೇಂದ್ರ ಸರ್ಕಾರವು ೨೦೧೩ರಲ್ಲಿ ಆದೇಶ ಹೊರಡಿಸಿತು. ಅದಕ್ಕೆ ರಾಜ್ಯ ಸರ್ಕಾರ ಒಪ್ಪಿ ೧೨ ಅಂಶಗಳ ಯೋಜನೆಯನ್ನು ರೂಪಿಸಿತು. ಆಗ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ನಿರಂಜನ ಮಠದ ಜಾಗ ಮತ್ತು ಪಕ್ಕದ ಶಾಲಾ ಆವರಣ ಸಮೇತ ಸಂಪೂರ್ಣ ಜಾಗವನ್ನು ಸ್ಮಾರಕದ ನಿರ್ಮಾಣಕ್ಕೆ ಗುರುತಿಸಿತು. ಮೈಸೂರಿನ ರಾಮಕೃಷ್ಣ ಆಶ್ರಮವೇ ಯೋಜನೆಯ ಜವಾಬ್ದಾರಿಯನ್ನು ತೆಗೆದುಕೊಂಡರೆ ಸ್ಥಳವನ್ನು ಹಸ್ತಾಂತರಿಸಲಾಗುವುದೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಿತು. ಹೀಗೆ ಸರ್ಕಾರದ ಸಲಹೆ ಮೇರೆಗೆ ಶ್ರೀರಾಮಕೃಷ್ಣ ಆಶ್ರಮವು ತನ್ನ ಕೇಂದ್ರ ಕಚೇರಿಯಾದ ಬೇಲೂರು ಮಠದಿಂದ ಸ್ಮಾರಕ ಯೋಜನೆಯನ್ನು ಕೈಗೆತ್ತಿಕೊಳ್ಳಲು ಲಿಖಿತ ಅನುಮತಿಯನ್ನು ಪಡೆಯಿತು. ಈ ರೀತಿ ಯೋಜನೆಯು ಸ್ವೀಕೃತಿಗೊಂಡಿತು. ಅಂದಿನ ಕರ್ನಾಟಕ ಸರ್ಕಾರವು ದಿನಾಂಕ ೯ ಜನವರಿ ೨೦೧೩ರಂದು ಸರ್ಕಾರಿ ಆದೇಶವನ್ನು ಹೊರಡಿಸಿ, ರಾಜ್ಯ ಸರ್ಕಾರವು ಶಿಕ್ಷಣ ಇಲಾಖೆಯ ಮೂಲಕ ಆ ಜಾಗ ಮತ್ತು ಹಳೆಯ ಕಟ್ಟಡಗಳನ್ನು, ಸರ್ಕಾರಿ ಎನ್.ಟಿ. ಎಂ. ಶಾಲೆಯೂ ಸೇರಿದಂತೆ 'ವಿವೇಕ ಸ್ಮಾರಕ ಮತ್ತು ಯುವ ಸಾಂಸ್ಕೃತಿಕ ಕೇಂದ್ರ'ದ ನಿರ್ಮಾಣಕ್ಕಾಗಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ನೀಡಬೇಕೆಂದು ಆದೇಶಿ

'ವಿವೇಕ ಸ್ಮಾರಕ'ದ ಶಂಕುಸ್ಥಾಪನೆ ಕಾರ್ಯಕ್ರಮ





ಸಿತು. ೨೦೧೩ರ ಸರ್ಕಾರಿ ಆದೇಶದ ಮೂಲಕ ನಿರ್ಮಾಣದ ಹೊಣೆಗಾರಿಕೆಯನ್ನು ಮತ್ತು ಸಂಪೂರ್ಣ ಜಾಗವನ್ನು ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಚೆಕ್ಕುಬಂದಿ ಸಮೇತ ಹಸ್ತಾಂತರಿಸಿತು. 'ಭಾರತೀಯ ಆಧ್ಯಾತ್ಮಿಕ ಸಮಾವೇಶ – ವಿವೇಕ ಪಾದಸ್ಪರ್ಶ' ಎಂಬ ಸಮಾರಂಭಗಳು ನಡೆದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸದಾನಂದ ಗೌಡರು ನಿರಂಜನ ಮಠದ ಜಾಗವನ್ನು ರಾಮಕೃಷ್ಣ ಆಶ್ರಮದ ಹಿರಿಯ ಸ್ವಾಮಿಗಳ ಸನ್ನಿಧಿಯಲ್ಲಿ 'ವಿವೇಕ ಸ್ಮಾರಕ' ಎಂದು ಘೋಷಿಸಿ ಉದ್ಘಾಟಿಸಿದರು.


## ಶ್ರೇಯಾಂಸಿ ಬಹು ವಿಘ್ನಾನಿ

ಆಗಿನ ಸರ್ಕಾರವು ಈ ಯೋಜನೆಗಾಗಿ ೫ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿತು. ಆದರೆ ಅಂದಿನಿಂದಲೂ ಶ್ರೀ ರಾಮಕೃಷ್ಣ ಆಶ್ರಮವು ಈ ಜಾಗಕ್ಕೆ ತೆರಿಗೆಯನ್ನು ಸರ್ಕಾರಕ್ಕೆ ಪ್ರತಿ ವರ್ಷವೂ ಪಾವತಿಸುತ್ತಾ ಬಂದಿತು. ಸರ್ಕಾರಿ ಆದೇಶ (G.O.) ಆಗಿ ಅನುದಾನವು ಮಂಜೂರಾಗಿದ್ದರೂ ಕೂಡ ಇಲ್ಲಿಯವರೆಗೆ ಆ ಜಾಗವು ಭೌತಿಕವಾಗಿ ಆಶ್ರಮಕ್ಕೆ ಹಸ್ತಾಂತರಗೊಂಡಿರಲಿಲ್ಲ. ಶಾಲೆಯನ್ನು ಹಸ್ತಾಂತರಿಸುವುದಕ್ಕೆ ಕೆಲವು ವ್ಯಕ್ತಿಗಳ ವಿರೋಧವು ವ್ಯಕ್ತವಾಗಿ, ಸರ್ಕಾರವಿನ್ನೂ ಆ ಸ್ಥಳವನ್ನು ರಾಮಕೃಷ್ಣ ಆಶ್ರಮಕ್ಕೆ ನೀಡಿರಲಿಲ್ಲ. ಈ ವಿಷಯವು ಹಲವು ನ್ಯಾಯಾಲಯಗಳ ಮುಖಾಂತರ ತೀರ್ಮಾನಗೊಂಡು ಕೊನೆಗೆ ಕರ್ನಾಟಕ ಉಚ್ಚ ನ್ಯಾಯಾಲಯದ ತನಕ ಹೋಗಿ ಇತ್ಯರ್ಥಗೊಂಡಿತು. ವಿವಿಧ ಹಂತದ ನ್ಯಾಯಾಲಯಗಳು ಸರ್ಕಾರದ ಆದೇಶವನ್ನು ಎತ್ತಿ ಹಿಡಿದು, ಆ ಜಾಗವನ್ನು ಶ್ರೀರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರಿಸುವುದು ಕಾನೂನು ಬದ್ಧವೇ ಆಗಿದೆ ಎಂದು ದೃಢೀಕರಿಸಿದುವು. ಸರ್ಕಾರದ ಆದೇಶದ ಮೇರೆಗೆ ಮಹಾರಾಣಿ ಎನ್. ಟಿ. ಎಂ. ಶಾಲೆಯನ್ನು, ಎದುರಿನ ಆವರಣದಲ್ಲಿರುವ, ತನ್ನ ಮೂಲ ಸ್ಥಾನವಾದ ಮಹಾರಾಣಿ ಕಾಲೇಜಿನ ಆವರಣಕ್ಕೆ ಸ್ಥಳಾಂತರಗೊಳಿಸಿ ಎಲ್ಲ ವಿವಾದಗಳೂ ಅಂತ್ಯಗೊಂಡವು. ೨೦೨೨ರ ಫೆಬ್ರವರಿ ತಿಂಗಳಲ್ಲಿ ಮತ್ತೊಮ್ಮೆ ಹಳೆಯ ಶಾಲಾ ಆವರಣ ಮತ್ತು ಪಕ್ಕದ ಕಟ್ಟಡದ ಸ್ಥಳವನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರಿಸಲಾಯಿತು. 'ಒಳ್ಳೆಯ ಕೆಲಸಕ್ಕೆ ನೂರಾರು ವಿಘ್ನಗಳು' ಎಂಬಂತೆ ಸಾಕಷ್ಟು ಅಡೆತಡೆಗಳು ಬಂದರೂ ಅವೆಲ್ಲ ದಿವ್ಯತ್ರಯರ ಆಶೀರ್ವಾದದೊಂದಿಗೆ ಪರಾಭವಗೊಂಡವು.

ಈ ಎಲ್ಲ ತಳಮಳಗಳ ಮಧ್ಯೆ ಸಂಯಮವನ್ನು ಬಿಡದೆ ದಿವ್ಯತ್ರಯರ ಕೃಪೆಯೊಂದನ್ನಾಶ್ರಯಿಸಿ, ಎಲ್ಲರ ಸಹಕಾರದೊಂದಿಗೆ ಸರ್ವಜನಹಿತಕಾರಿಯಾಗುವ ಈ ಸೇವಾಕೇಂದ್ರಕ್ಕಾಗಿ ದುಡಿದವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜಿ ಮಹಾರಾಜರು. ಈ ಸ್ಮಾರಕದ ಇತಿಹಾಸದಲ್ಲಿ ಅವರ ಪಾತ್ರ ಗಮನಾರ್ಹವಾದುದು.

## ಭೂಮಿಪೂಜೆ

೧೮೯೪ ರಲ್ಲಿ ಸ್ವಾಮಿ ವಿವೇಕಾನಂದರು, ''ಕಾಲಾಂತರದಲ್ಲಿ ಮೈಸೂರು ಬಹುದೊಡ್ಡ ಕಾರ್ಯಕ್ಷೇತ್ರವಾಗುವುದು'' ಎಂದು ಭವಿಷ್ಯ ನುಡಿದಿದ್ದರು. ಅದರ ಸಾಕಾರ ರೂಪು ತಳೆಯುವ


'ವಿವೇಕ ಸ್ಮಾರಕ' ಕಟ್ಟಡದ ಮಾದರಿ

ಮುಹೂರ್ತ ಆರಂಭಗೊಂಡಿತು. ೫.೭.೨೨ರಂದು ಭೂಮಿಪೂಜೆ ವೈದಿಕ ವಿಧಿವಿಧಾನಗಳೊಂದಿಗೆ ಅದ್ದೂರಿಯಾಗಿ ನೆರವೇರಿಸಿತು. ಇದರಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು , ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ವಿವಿಧ ಕೇಂದ್ರಗಳಲ್ಲಿರುವ ರಾಮಕೃಷ್ಣ ಆಶ್ರಮದ ಸ್ವಾಮಿಗಳು ಮತ್ತು ಬ್ರಹ್ಮಚಾರಿಗಳು, ಗದುಗಿನ ಕಪ್ಪತಗುಡ್ಡದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು, ಹಲವಾರು ಸಾಧು ಸತ್ಪುರುಷರು, ಭಕ್ತರು, ಯುವಕರು ಹಾಗೂ ವಿದ್ಯಾರ್ಥಿಗಳು, ರಾಜಕೀಯ ನೇತಾರರು ಪಾಲ್ಗೊಂಡರು. ಈಗ 'ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕ'ದ ನಿರ್ಮಾಣದ ಕಾರ್ಯ ಆರಂಭವಾಗಿದೆ.

ಅಕ್ಟೋಬರ್ ೨೦೨೨ ರಂದು ಸಾಂಸ್ಕೃತಿಕ ಯುವ ಕೇಂದ್ರದ ನಿರ್ಮಾಣ ಆರಂಭವಾಯಿತು. ಮಾರ್ಚ್ ೨೩ರಂದು ಉತ್ಖನನ ಪೂರ್ಣಗೊಂಡಿತು. ಮೇ ೨೩ ರಂದು ಆನೆಕ್ಸ್ ಕಟ್ಟಡದ ಅಡಿಪಾಯ ಪ್ರಾರಂಭವಾಯಿತು. ಜೂನ್ ೨೩ರ ವೇಳೆಗೆ ನೆಲಮಾಳಿಗೆ ಮತ್ತು ಸೀಲಿಂಗ್ ಪೂರ್ಣಗೊಂಡಿತು. ಡಿಸೆಂಬರ್ ೨೩ ರಂದು ನೆಲಮಹಡಿ ಮತ್ತು ಮೇಲ್ಛಾವಣಿ ಪೂರ್ಣಗೊಂಡಿತು. ಯೋಜಿತ ಮೈಲಿಗಲ್ಲುಗಳು ನಿರ್ಮಾಣದ ಹಂತದಲ್ಲಿವೆ. ನವೆಂಬರ್ ೨೦೨೩ ಮೊದಲ ಮಹಡಿ ಪೂರ್ಣಗೊಂಡಿದೆ. ಜೂನ್ ೨೦೨೩ ಆಂಫಿಥಿಯೇಟರ್ ಪೂರ್ಣಗೊಂಡಿದೆ. ಡಿಸೆಂಬರ್ ೨೪ ಪ್ರದರ್ಶನ ಪೂರ್ಣಗೊಳ್ಳುವ ವಿಶ್ವಾಸವಿದೆ. ಮಾರ್ಚ್ ೨೫ ಏಕಾಗ್ರತೆಯ ಅನುಭವ ಕೇಂದ್ರ ಪೂರ್ಣಗೊಳ್ಳುವ ನೀರಿಕ್ಷೆ ಇದೆ. ಜನವರಿ, ೨೦೨೫ರಂದು ಆಶ್ರಮದ ಶತಮಾನೋತ್ಸವವು ಜರುಗುವ ಸಂದರ್ಭದಲ್ಲೇ ಬಹುತೇಕ ಸ್ಮಾರಕದ ಉದ್ಘಾಟನೆಯೂ ನೆರವೇರಬಹುದು.

## 'ವಿವೇಕ ಸ್ಮಾರಕ' ಕಟ್ಟಡದ ವಿವಿಧ ಅಂಗಗಳು

'ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ–ವಿವೇಕ ಸ್ಮಾರಕ' ಕಟ್ಟಡದಲ್ಲಿ ಈ ಪ್ರಮುಖ ಅಂಗಗಳಿರುತ್ತವೆ:

೧. ೯೦೦ ಮಂದಿ ಕುಳಿತುಕೊಳ್ಳಲು ಸಾಧ್ಯವಾಗುವ ಆಂಪಿ ಥಿಯೇಟರ್

೨. ಗಾಢ ಅನುಭವ ಸಾಧ್ಯತೆಯ ಥಿಯೇಟರ್ (Immersive Experience Theatre)

೩. ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೊಠಡಿ

೪. ತರಗತಿ ಕೋಣೆಗಳು

೫. ಗ್ರಂಥಾಲಯ

೬. ವಿಚಾರ ಸಂಕಿರಣ ಕೊಠಡಿಗಳು

೭. ಆಡಳಿತ ಸಂಕೀರ್ಣ

೮. ಯೋಗ ಮತ್ತು ಧ್ಯಾನ ಮಂದಿರ

೯. ಸಂವಾದ ಕೊಠಡಿ (Counselling Room)

೧೦. ಸ್ವಾಮಿ ವಿವೇಕಾನಂದ ಚಿತ್ರಪ್ರದರ್ಶನ - ಯುವಕರಿಗೆ ಸ್ವಾಮೀಜಿ ಜೀವನ, ಸಂದೇಶಗಳನ್ನು ಒಳಗೊಂಡಿರುತ್ತದೆ

೧೧. ಪುಸ್ತಕ ಮಳಿಗೆ - ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯ ಗ್ರಂಥಗಳ ಪ್ರದರ್ಶನ ಮತ್ತು ಮಾರಾಟ

### ವಿವಿಧ ಚಟುವಟಿಕೆ ಹಾಗೂ ತರಬೇತಿಗಳ ಯೋಜನೆ

'ವಿವೇಕ ಸ್ಮಾರಕ' - ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರದಲ್ಲಿ ಈ ಕೆಳಗಿನ ಪ್ರಧಾನ ಚಟುವಟಿಕೆಗಳನ್ನು ನಡೆಸುವ ಯೋಜನೆಗಳನ್ನು ಸದ್ಯಕ್ಕೆ ಹಾಕಿಕೊಳ್ಳಲಾಗಿದೆ:

#### ೧. ಜೀವನ ಕೌಶಲ್ಯಾಭಿವೃದ್ಧಿ ಮತ್ತು ನಡವಳಿಕೆಯ ವಿಜ್ಞಾನ

★ ಮನಸ್ಸಿನ ನಿರ್ವಹಣೆ

★ ಒತ್ತಡ ಮತ್ತು ಸಮಯ ನಿರ್ವಹಣೆ

★ ಮನಸ್ಸು-ಬುದ್ಧಿ, ಇಚ್ಛಾಶಕ್ತಿ, ಭಾವನೆ, ನೆನಪು ಇವುಗಳ ಪ್ರಾಯೋಗಿಕ ನಿರ್ವಹಣೆ

★ ವೈಯಕ್ತಿಕ-ಸಾಮಾಜಿಕ ಸಂಬಂಧಗಳ ನಿರ್ವಹಣೆ

★ ಕರ್ಮಯೋಗ - ಉನ್ನತ ಕಾರ್ಯಕುಶಲತೆಯ ಬೆಳವಣಿಗೆ

★ ಉನ್ನತ ಗುಣಗಳನ್ನು ರೂಢಿಸಿಕೊಳ್ಳುವ ಪಾಠಗಳು

★ ನಾಯಕತ್ವ ಮತ್ತು ತಂಡ ಕುಶಲತೆಯ ಬೆಳವಣಿಗೆ

★ ಯೋಗಾಸನ - ಪ್ರಾಣಾಯಾಮ

#### ೨. ವೃತ್ತಿಪರ ಕೌಶಲ್ಯಗಳು

★ ಇಂಗ್ಲಿಷ್ ಸಂಭಾಷಣೆ ಹಾಗೂ ಸಂವಹನ

★ ಕನ್ನಡ ಬರವಣಿಗೆಯ ಸಾಮರ್ಥ್ಯ

★ ಸಾರ್ವಜನಿಕ ಮಂಡನಾ ಸಾಮರ್ಥ್ಯ

★ ಪ್ರಧಾನ ಕಂಪ್ಯೂಟರ್ ತಿಳಿವಳಿಕೆ

★ ಸ್ಪರ್ಧಾತ್ಮಕ ಪರೀಕ್ಷೆಯ ಅಧ್ಯಯನಗಳಿಗೆ ಸೌಕರ್ಯ

★ ಔದ್ಯೋಗಿಕ ಸಂಬಂಧಿ ಸಲಹೆಗಳು

#### ೩. ಸಾಂಸ್ಕೃತಿಕ ಅರಿವು

★ ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಇತಿಹಾಸದ ಅವಲೋಕನ

★ ಭಾರತದ ಆಧ್ಯಾತ್ಮಿಕ ಆದರ್ಶಗಳ ವಿಶ್ವವಿಶಾಲ ದೃಷ್ಟಿಕೋನದ ಅರಿವು

★ ವಿಶ್ವಶಾಂತಿ ಪ್ರಾರ್ಥನೆಗಳು

★ ಹಾಡುಗಾರಿಕೆ ಹಾಗೂ ಸಾಂಪ್ರದಾಯಿಕ ವಾದ್ಯಸಂಗೀತಗಳ ತರಬೇತಿ

★ ಆರೋಗ್ಯಕ್ಕಾಗಿ ಸಾಂಪ್ರದಾಯಿಕ ಮನೆ ಮದ್ದುಗಳ ಅರಿವು

ಪ್ರೌಢಶಾಲೆಯ ವಿದ್ಯಾರ್ಥಿಗಳು, ಕಾಲೇಜು ವಿದ್ಯಾರ್ಥಿಗಳು, ನಿರುದ್ಯೋಗಿ ಯುವಕರು, ಹೊಸದಾಗಿ ಉದ್ಯೋಗ ಪಡೆದ ಯುವಕರು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಯುವಕರು, ಬುಡಕಟ್ಟು ಹಾಗೂ ಗ್ರಾಮೀಣ ಯುವಕರು ಹಾಗೂ ಪಾಲಕ-ಪೋಷಕ ವರ್ಗದವರಿಗೆ ಈ ಮೇಲಿನ ತರಬೇತಿ ಕಾರ್ಯಕ್ರಮಗಳು ನೆರವಾಗಲಿವೆ.

ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದ ನವೆಂಬರ್-೧೮೯೨ರಿಂದ ಜನವರಿ-೨೦೨೫ರವರೆಗಿನ ಕಾಲಘಟ್ಟದ ತಿರುವುಗಳ ಅವಲೋಕನವನ್ನು ಮಾಡಿದೆವು. ಮುಂದಿನ ದಿನಗಳಲ್ಲಿ ಎಲ್ಲರೂ ಇದರ ಸದುಪಯೋಗವನ್ನು ಪಡೆದುಕೊಳ್ಳಲಿ ಎಂಬ ಸದಾಶಯದೊಂದಿಗೆ ಈ ಸ್ಮಾರಕದ ಉಜ್ಜ್ವಲ ಭವಿಷ್ಯವನ್ನು ಹಾರೈಸುತ್ತಾ ಈ ಬರಹವನ್ನು ಸಮಾಪ್ತಿಗೊಳಿಸೋಣ. ✽

## ಮಹಾಶಿವರಾತ್ರಿಯ ಕಥೆ

ರುದ್ರ-ಶಿವ ದೇವತಾರಾಧನೆ ಋಗ್ವೇದದಷ್ಟೇ ಪ್ರಾಚೀನವಾದುದು. ಶಿವಾರಾಧನಾ ಪದ್ಧತಿ ಅಥವಾ ಶೈವ ಸಂಪ್ರದಾಯವೂ ಅಷ್ಟೇ. ಶಿವನಿಗೆ ಸಂಬಂಧಿಸಿ ಧರ್ಮಾಚರಣೆಗಳು ಬಹಳ ಹಿಂದಿನ ಕಾಲದಿಂದಲೂ ಇದ್ದಿರಬೇಕು.

ಸ್ಕಾಂದ, ಪದ್ಮ, ಗರುಡ ಮುಂತಾದ ಕೆಲವು ಪುರಾಣಗಳಲ್ಲಿ ಬರುವ ಹಲವಾ ಕಥೆಗಳಲ್ಲಿ, ಪ್ರಕರಣಗಳಲ್ಲಿ, ಮಹಾಶಿವರಾತ್ರಿ ವ್ರತದ ಮಹಿಮೆಯನ್ನು ಪ್ರಶಂಸಿಸಲಾಗಿದೆ. ಈ ಕಥೆ ಹಾಗೂ ಪ್ರಕರಣಗಳಲ್ಲಿ ಹೆಚ್ಚು ಬಳಕೆಯ ಹಿಂದೂ ಹಬ್ಬಗಳು ಮತ್ತು ಉತ್ಸವಗಳಲ್ಲಿರುವುದು ಕಿರಾತನ ಅಥವಾ ಆದಿವಾಸಿ ಬೇಡನ ಕಥೆ. ಒಂದು ದಿನ, ಅದು ಮಹಾ ಶಿವರಾತ್ರಿ ಎಂಬುದನ್ನರಿಯದೆ, ಅವನು ಅಸಹಾಯಕ ಪರಿಸ್ಥಿತಿಯಲ್ಲಿ ಸಿಲುಕಿ ನಿರಶನ ಜಾಗರಣೆಗಳನ್ನಾಚರಿಸುತ್ತಾ ಶಿವಲಿಂಗಕ್ಕೆ ಅಭಿಷೇಕ ಮಾಡಿದ್ದರಿಂದ ಅವನಿಗೆ ಶಿವಲೋಕ ಪ್ರಾಪ್ತಿಯಾಯಿತಂತೆ. ಅಂದಮೇಲೆ ಅರಿತು ಭಕ್ತಿಯಿಂದ ಆರಾಧಿಸಿದವರಿಗೆ ಇನ್ನೂ ಹೆಚ್ಚಿನ ಲಾಭವಾಗಬೇಕಲ್ಲವೆ! ಇಂಥ ಪ್ರೇರಣೆಯನ್ನು ಮೂಡಿಸುವುದೇ ಈ ಕಥೆಯ ಉದ್ದೇಶ.

*(ಸ್ವಾಮಿ ಹರ್ಷಾನಂದರ 'ಹಿಂದೂ ಹಬ್ಬಗಳು ಮತ್ತು ಉತ್ಸವಗಳು' ಪುಸ್ತಕದಿಂದ, ಪು. ೩೮)*